OS No.95 /2018 PW-**1**

**<u>ದಿನಾಂಕ 23.08.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು ಃ 2 ರಿಂದ 4 ನೇ ಪ್ರತಿವಾದಿ ಪರ ಶ್ರೀ ಕೆ ಟಿ ಟಿ ವಕೀಲರಿಂದ ಃ</u>**

ರಾಜುರವರ ಹಿಸ್ಸೆ, ಇದೇ ಹಿಸ್ಸೆ ಎಂದು ನನಗೆ ರಾಜುರವರೇ ತೋರಿಸಿರುತ್ತಾರೆ. 2 ಲಕ್ಷದ 90 ಸಾವಿರ ಹಣವನ್ನು ಚೆಕ್ ಮುಖಾಂತರ ರಾಜುರವರಿಗೆ ಪಾವತಿ ಮಾಡಿರುತ್ತೇನೆ. ಸದರಿ ಚೆಕ್ ದಿಃ11.07.2018 ರಂದು ನಗದಾಗಿರುತ್ತದೆ. ಸದರಿ ಅಗ್ರಿಮೆಂಟ್ ಗೆ ಪ್ರತಿವಾದಿಗಳು ಸಹಿ ಹಾಕಿ ನಂತರ ಚೆಕ್ ಅನ್ನು ತೆಗೆದುಕೊಂಡು ಹೋಗಿರುತ್ತಾರೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸದರಿ 2 ಲಕ್ಷದ 90 ಸಾವಿರ ಹಣ ದಿಃ11.07.2018 ರಂದು ನಗದಾಗಿರುತ್ತದೆ ಎನ್ನುವ ಬಗ್ಗೆ ತಿಳಿಸಿಲ್ಲ. ನಿಪಿ-1 ರ ಕರಾರು ಪತ್ರವನ್ನು ವಕೀಲರ ಕಛೇರಿಯಲ್ಲಿ ಬರೆಯಲಾಗಿದೆ. ಸದರಿ ನಿಪಿ-1 ರ ಕರಾರು ಪತ್ರಕ್ಕೆ ವಿವರಗಳನ್ನು ರಾಜುರವರೇ ಖುದ್ದಾಗಿ ಕೊಟ್ಟಿರುತ್ತಾರೆ. ಸದರಿ ವಕೀಲರ ಕಛೇರಿಯಲ್ಲಿ ನಾನು, ನನ್ನ ತಂದೆ ಮತ್ತು ರಾಜುರವರು ಹಾಜರಿದ್ದೆವು. ನಮ್ಮನ್ನು ಹೊರತುಪಡಿಸಿ ಅಲ್ಲಿ ಬೇರೆ ಯಾರೂ ಹಾಜರುಇರಲಿಲ್ಲ. ನಿಪಿ-1 ರ ಕರಾರುಪತ್ರದ ಬರವಣಿಗೆಯ ಸಮಯಕ್ಕೆ ರಾಜುರವರ ಮಕ್ಕಳ ಒಪ್ಪಿಗೆಯನ್ನು ಪಡೆದುಕೊಂಡಿರಲಿಲ್ಲ. ಸದರಿ ಸ್ವತ್ತಿನ ಬಗ್ಗೆ ವ್ಯಾಪಾರ ಮಾಡಿದ್ದೆ ಎಂದು ಹೇಳುವ ಸಮಯದಲ್ಲಿ ಸದರಿ ಸ್ವತ್ತು ರಾಜುರವರ ಅಣ್ಣ ತಮ್ಮಂದಿರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ಮಾರಾಟ ಮಾಡಲು ರಾಜುರವರ ಅಣ್ಣ ತಮ್ಮಂದಿರಿಗೆ ಒಪ್ಪಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಸ್ವತ್ತಿನ ವ್ಯಾಪಾರದ ಮಾತುಕತೆ ಮಾಡುವ ಸಮಯದಲ್ಲಿ ರಾಜುರವರಿಗೆ ತಿಂಗಳಿಗೆ 40 ಸಾವಿರ ಸಂಬಳ ಬರುತ್ತಿತ್ತು ಎಂದರೆನನಗೆ ಗೊತ್ತಿಲ್ಲ. ಅದೇ ಸಂದರ್ಭದಲ್ಲಿ ವ್ಯವಸಾಯದಿಂದ ರಾಜುರವರಿಗೆ ವರ್ಷಕ್ಕೆ 2-3 ಲಕ್ಷ ರೂಪಾಯಿಗಳ ಆದಾಯವಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ರಾಜುರವರಿಗೆ ಯಾವುದೇ ಸಾಲ ಇರಲಿಲ್ಲ ಎಂದರೆ ನನಗೆ

ಗೊತ್ತಿಲ್ಲ. ಸಾಲ ತೀರಿಸುವ ಸಲುವಾಗಿ ಆಸ್ತಿ ಮಾರಾಟ ಮಾಡುವ ಅವಶ್ಯಕತೆ ರಾಜುರವರಿಗೆ 2018 ರಲ್ಲಿ ಬಂದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ರಾಜುರವರಿಗೆ ಮದ್ಯಪಾನ ಮಾಡುವ ಚಟ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ಕರಾರು ಪತ್ರದಲ್ಲಿ ಸಾಕ್ಷಿಯಾಗಿ ಸಹಿ ಹಾಕಿದಂತಹ ಟಿ. ಪುಟ್ಟಗಿರಿಗೌಡರವರು ಊರಿನಲ್ಲಿ ತುಂಬಾ ಪ್ರಭಾವಿ ವ್ಯಕ್ತಿಯಾಗಿರುತ್ತಾರೆಂದರೆ ಸಾಕ್ಷಿ ಊರಿಗೆ ಮುಖಂಡರು ಅಷ್ಟೇ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಊರಿನ ಆಸುಪಾಸು ಇದೆ ಎಂದರೆ ಹೌದು. ದಾವಾ ಸ್ವತ್ತು ತುಂಬಾ ಬೆಲೆ ಬಾಳುವಂತಹದ್ದು ಎಂದರೆ ಆವಾಗಿನ ಬೆಲೆ ಅಷ್ಟು ಇತ್ತು ಎಂದು ನುಡಿಯುತ್ತಾರೆ. ಈ ದಾವಾ ಸ್ವತ್ತು ಮುಂದೆ ಸೈಟುಗಳಾಗಿ ವಿಂಗಡಣೆ ಮಾಡಲು ಅನುಕೂಲಕರವಾಗಿದೆ ಎಂದರೆ ಇಲ್ಲ. ನಾನು ಅಮ್ಮಳ್ಳಿ ದೊಡ್ಡಿ ಗ್ರಾಮದ ವಾಸಿಯಲ್ಲ ಎಂದರೆ ಹೌದು. ಸದರಿ ಅಮ್ಮಳ್ಳಿದೊಡ್ಡಿ ಗ್ರಾಮದ ಆಸುಪಾಸು ನನಗೆ ಸೇರಿದ ಯಾವುದೇ ಜಮೀನುಗಳು ಇಲ್ಲ ಎಂದರೆ ಹೌದು. ಪುಟ್ಟಗಿರಿಗೌಡರವರು ಮತ್ತು ನಾನು ಸೇರಿಕೊಂಡು ರಾಜುರವರ ಜಮೀನನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಅವರಿಗೆ ಯಾವುದೇ ವಿಷಯ ಹೇಳದೇ ಅವರಿಂದ ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ರಾಜುರವರು ವಕೀಲರ ಕಛೇರಿಗೆ ಬಂದಿರಲಿಲ್ಲ ನಿಪಿ-1 ರಲ್ಲಿರುವ ಸಹಿಯನ್ನು ನಾವು ಅವರ ಪೋಲಿಸ್ ಕಛೇರಿಯಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ರಾಜುರವರು ಸದರಿ ಸಹಿಯನ್ನು ಪುಟ್ಟಗಿರಿಗೌಡರವರ ಬೆದರಿಕೆಗೆ ಹೆದರಿ ಸಹಿ ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ಆ ಸಮಯದಲ್ಲಿ ರಾಜುರವರಿಗೆ ಈ ದಾವಾ ಸ್ವತ್ತನ್ನು ಮಾರಾಟ ಮಾಡುವಂತಹ ಸಂಪೂರ್ಣ ಹಕ್ಕು ಅವರಿಗೆ ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎಂದು ನುಡಿಯುತ್ತಾರೆ. ರಾಜುರವರು ಅವರ ಸಂಪೂರ್ಣ ಮನಸ್ಸಿನಿಂದ ಒಪ್ಪಿ ಸದರಿ ಈ ದಾವಾ ಸ್ವತ್ತನ್ನು ಮಾರಾಟ ಮಾಡಿಲ್ಲ ಮತ್ತು ದಾವಾ ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಅವರಿಗೆ ಇರಲಿಲ್ಲ ಆದ್ದರಿಂದ ಅವರು ಯಾವುದೇ ಕ್ರಯ ಪತ್ರವನ್ನು ನನಗೆ ಬರೆದು ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ನಾನು ರಾಜುರವರಿಗೆ ಚೆಕ್ ಆಗಲೀ ಅಥವಾ 10 ಸಾವಿರ ರೂಪಾಯಿ ನಗದು ಹಣವಾಗಲೀ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಕರಾರು ಪತ್ರ ಆದ ಸುಮಾರು ದಿನಗಳ ನಂತರ ನಾನು ರಾಜುರವರ ಬ್ಯಾಂಕ್ ಖಾತೆಗೆ

ಹಣವನ್ನು ವರ್ಗಾವಣೆ ಮಾಡಿ ಅದೇ ಆಧಾರದದಿಂದ ಸುಳ್ಳು ಹಕ್ಕನ್ನು ಮಂಡಿಸಲು ಪ್ರಯತ್ನಿಸುತ್ತಿದ್ದೇನೆಂದರೆ ಸರಿಯಲ್ಲ. ಇದಾದ ನಂತರ ರಾಜುರವರ ಮಕ್ಕಳು ನಮ್ಮನ್ನು ಕರೆಯಿಸಿ ನಾವು ದಾವಾ ಸ್ವತ್ತನ್ನು ಮಾರಾಟ ಮಾಡುವುದಿಲ್ಲ ಎಂದು ಹೇಳಿರುತ್ತಾರೆಂದರೆ ಸುಳ್ಳು. ದಾವಾ ಸ್ವತ್ತಿನ ಹಕ್ಕುದಾರರು ನಮಗೆ ಸದರಿ ಸ್ವತ್ತನ್ನು ಮಾರಾಟ ಮಾಡದೇ ಇರುವುದರಿಂದ ಸದರಿ ಕರಾರು ಪತ್ರ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ಶುಭಾ)**

**ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**